International Journal for Multidisciplinary Research (IJFMR)
E-ISSN: 2582-2160 ● Website: www.ijfmr.com ● Email: editor@ijfmr.com

# ವಚನ ಸಂಕ್ರಾಂತಿ : ಬದಲಾವಣೆಯ ಆಶಯಗಳು

**ಡಾ.ಶುಭಾ ಮರವಂತೆ**

ಸಹ ಪ್ರಾಧ್ಯಾಪಕರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ

ಭಾರತೀಯ ಸಂಸ್ಕೃತಿ ವೈವಿಧ್ಯತೆ, ಆದರ್ಶ, ಮೌಲ್ಯ ಪರಂಪರೆಯೇ ಮೊದಲಾದ ನೈತಿಕ ಸತ್ವಗಳಿಗಾಗಿ ಪ್ರಪಂಚಕ್ಕೆ ಮಾದರಿಯಾಗಿದೆ. ನಮ್ಮ ಎಲ್ಲಾ ಹಬ್ಬ ಆಚರಣೆಗಳಲ್ಲಿ ಧರ್ಮ-ಪ್ರಕೃತಿ - ಸಂಸ್ಕೃತಿಗಳ ಸಮನ್ವಯವಿದೆ. ಸಹಜ ಪ್ರಾಕೃತಿಕ ಬದಲಾವಣೆಯನ್ನು ಧಾರ್ಮಿಕ ಚೌಕಟ್ಟಿನಲ್ಲಿ ಆರಾಧಿಸುವ, ಸಂಭ್ರಮಗೊಳ್ಳುವ, ಹಬ್ಬ ಆಚರಣೆಗಳ ಭಾಗವಾಗಿಸುವ ಜನಪದರ ಜೀವನ ದೃಷ್ಟಿಯೇ ಇಲ್ಲಿ ಪ್ರಧಾನ. ಜನ ಜೀವನ ಸುಖ, ಶಾಂತಿ, ಸಮೃದ್ಧಿಯಿಂದ ಬದುಕಬೇಕೆನ್ನುವ ಸದಾಶಯದ ಹಿನ್ನಲೆಯಲ್ಲಿ ನಮ್ಮ ಹಲವು ಆಚರಣೆಗಳು, ಹಬ್ಬ, ಹರಿದಿನಗಳು ಹಿಂದಿನಿಂದಲೂ ನಡೆದುಕೊಂಡು ಬಂದಿವೆ. ಸಂಕ್ರಾಂತಿ, ಯುಗಾದಿ, ಚೌತಿ, ಪಂಚಮಿ ಹೀಗೆ ಎಲ್ಲಾ ಹಬ್ಬಗಳು ಇದಕ್ಕೆ ಉದಾಹರಣೆ. ಸಂಕ್ರಾಂತಿಗೆ ನಮ್ಮ ಸನಾತನ ಧಾರ್ಮಿಕ ಪರಂಪರೆಯಲ್ಲಿ ಹೆಚ್ಚಿನ ಮಹತ್ವವಿದೆ. ಪ್ರಕೃತಿಯಲ್ಲಾಗುವ ಬದಲಾವಣೆಗೆ ಮನುಷ್ಯ ತೋರುವ ಸ್ಪಂದನೆಯ ರೂಪದ ಹಲವು ಆಚರಣೆಗಳಲ್ಲಿ ಸಂಕ್ರಾಂತಿಯೂ ಒಂದು. ಭೂಮಿ ಸಕಲ ಜೀವ ಜಾಲಗಳಿಗೆ ಮಾತೃ ಸ್ವರೂಪಿ. ಭೂಮಿಯ ನಿರಂತರ ಚಲನೆಯೇ ಕಾಲ ಮಾಪಕ. ಇದರ ಹುಟ್ಟು ಹಿಡಿದು ನಡೆಸುವವರೆ ಸೂರ್ಯ ಚಂದ್ರರು. ಮನುಷ್ಯರು ರೂಢಿಸಿಕೊಂಡ ಈ ಎಲ್ಲಾ ಸಂಪ್ರದಾಯಗಳಿಗೂ ಭೂಮಿಯೇ ಆಧಾರ. ಭೂಮಿ ಕೇಂದ್ರಿತ ಆಚರಣೆಯ ಭಾಗವಾಗಿ ಸೂರ್ಯ-ಚಂದ್ರ, ಗ್ರಹ, ನಕ್ಷತ್ರ, ರಾಶಿ, ಋತು ಇತ್ಯಾದಿಗಳನ್ನು ಅನುಸರಿಸಿಯೇ ನಮ್ಮ ತಿಥಿ, ಪಂಚಾಂಗಗಳು ರಚನೆಯಾದವು. ಹೊಲ, ಗದ್ದೆ ಪೈರು, ಎತ್ತು-ದನ ಕರುಗಳು, ಎಳ್ಳು-ಬೆಲ್ಲ ಹೀಗೆ ಪ್ರಕೃತಿ ಪರಿಕರಗಳು ಪ್ರಕೃತಿ ಆರಾಧನೆಯ ಸಂಕೇತಗಳಾದವು. ಹಗಲು-ರಾತ್ರಿ- ಹುಟ್ಟು-ಸಾವಿನ ಪ್ರಶ್ನೆಗಳೆ ನಮ್ಮ ಶಾಸ್ತ್ರ ಆಚರಣೆ, ಸಂಪ್ರದಾಯಗಳಾಗಿ ರೂಪುಗೊಂಡವು. ಮನುಷ್ಯನಲ್ಲಿ ಭಯ, ಕಂದಾಚಾರ, ಮೌಢ್ಯತೆಗಳು ಬೆಳೆಯಲು ಕಾರಣವಾದವು. ಮುಗ್ಧ ಜನ ಸಮುದಾಯ ಈ ಭೀತ ಸ್ಥಿತಿಯಲ್ಲಿಯೇ ದೇವರನ್ನು ಸೃಷ್ಟಿಕೊಂಡರು. ಪಾಪ ಪುಣ್ಯ, ಧರ್ಮ ಅಧರ್ಮದ ಕಾರ್ಯ ಕಾರಣವನ್ನು ಮುಂದಿಡುವ ತರ್ಕ, ನೀತಿಗಳನ್ನು ರೂಪಿಸಲಾಯಿತು. ಮನುಷ್ಯ ಮನುಷ್ಯನ ನಡುವೆ ವಿಧಿ ನಿಷೇಧಗಳನ್ನು ತಂದಿಡುವ ವಿಧಿವಾದವನ್ನು ಹುಟ್ಟುಹಾಕಲಾಯಿತು. ಮನುಷ್ಯನನ್ನು ವಿಭಜಿಸುವ ವರ್ಣಸೃಷ್ಟಿಯೇ ನಮ್ಮ ಸಂಸ್ಕೃತಿಯ ದೊಡ್ಡ ದುರಂತವಾಯಿತು. ಇದಕ್ಕೆ ಪ್ರತಿಯಾಗಿ ಬುದ್ಧನಾದಿಯಾಗಿ ಬಸವ, ಗಾಂಧಿ ಅಂಬೇಡ್ಕರ್ ಹುಟ್ಟು ಹಾಕಿದ ಮೌಢ್ಯ ವಿರೋಧಿ ನಡೆಯೇ ನಿಜವಾದ ಕ್ರಾಂತಿ, ಹೊಸ ಅರ್ಥದ ಸಂಕ್ರಾಂತಿಯಾಯಿತು.

ಸಂಕ್ರಾಂತಿ ಉತ್ತರಾಯಣದ ಪರ್ವಕಾಲವೆಂದು ಕರೆಯಲಾಗುತ್ತದೆ. ಉತ್ತರಾಯಣವೆಂದರೆ ಬೆಳಕಿನ ಕಡೆಗೆ ಚಲನೆ, ಅರಿವಿನ ಕಡೆಗೆ ಚಲನೆ. ಸೂರ್ಯನ ಚಲನೆ ಮಕರ ರಾಶಿಯೆಡೆಗೆ ಎನ್ನುವುದು ವಿಶೇಷ. ಸಮ್ಯಕ್ ಕ್ರಮಣ. ಅಂದರೆ ಒಳಿತಿನೆಡೆಗೆ ಚಲಿಸುವುದು ಎಂದರ್ಥ. ಭಾರತೀಯ ಪರಂಪರೆಯಲ್ಲಿ ಒಳಿತು ಎನ್ನುವುದಕ್ಕೆ ವಿಶಾಲ ದೃಷ್ಟಿಕೋನವಿದೆ. ವ್ಯಕ್ತಿತ್ವದ ಉದಾತ್ತತೆ ಸಾಧಿಸುವುದು. ಮನುಷ್ಯ ಮನುಷ್ಯನನ್ನು ಗೌರವಿಸುವುದು. ಪುರಾಣಗಳ ಪ್ರಕಾರ ತಂದೆ ಮಗ ಸೂರ್ಯ ಶನಿ ಪರಸ್ಪರ ಇಬ್ಬರೂ ದೂರ ಉಳಿದವರು. ಸಂಕ್ರಾಂತಿಯ ಸಂದರ್ಭದಲ್ಲಿ ಮಕರ ರಾಶಿಯ ಅಧಿಮತಿಯಾದ ಶನಿಯ ಬಳಿ ಸೂರ್ಯ ಹೋಗಿ ಬಾಂಧವ್ಯದ ಬೆಸೆದ ಕಾರಣದಿಂದ ಸಂಕ್ರಾಂತಿ ಬಾಂಧವ್ಯ ಬೆಸುಗೆಯ ಹಬ್ಬವೂ ಹೌದು. ಹಾಗಾಗಿ ಮನುಷ್ಯರು ದ್ವೇಷ, ಜಗಳ, ಅಸೂಯೆ ಬಿಟ್ಟು ಜಗತ್ತಿನ ಸೌಂದರ್ಯ

ಆಸ್ವಾದಿಸುವ ಅವಕಾಶ ಸಂಕ್ರಾಂತಿ ನೀಡುತ್ತದೆ. ಸಂಕ್ರಮಣವು ಸ್ವರ್ಗದ ಬಾಗಿಲು ತೆರೆಯುವ ಕಾಲ ಎಂಬ ನಂಬಿಕೆಯಿದೆ. ನಮ್ಮ ಪರಂಪರಾಗತ ನಂಬಿಕೆ, ಶ್ರದ್ಧೆಗಳನ್ನು ವೈಚಾರಿಕ ತಳಹದಿಯಲ್ಲಿ ಪ್ರಶ್ನಿಸುವ ವಚನಕಾರರಿಗೆ ಆಚರಣೆಗಳನ್ನು ಮೌಢ್ಯವಾಗಿಸುವುದರ ಬಗೆಗೆ ವಿರೋಧವಿದೆ. ಆಚಾರಗಳು ವಿಚಾರಗಳಾಗಿ ಬದಲಾಗದೆ ಇದ್ದರೆ ಅದು ಮೌಢ್ಯವಾಗಬಹುದು ಎನ್ನುವ ಎಚ್ಚರಿಕೆಯಿದೆ. ಸ್ವರ್ಗ-ನರಕದ ಕಲ್ಪನೆಗಿಂತ ಇಹದ ಬದುಕನ್ನು ಸುಂದರಗೊಳಿಸುವ ಚಿಂತನೆಯ ಕ್ರಮ ಶರಣರಿಂದ ಚಾಲ್ತಿಗೆ ಬಂತು. ನಮ್ಮ ಆಚರಣೆ ಸಂಪ್ರದಾಯಗಳನ್ನು ಒರೆಗೆ ಹಚ್ಚಿ ನೋಡುವ ವಿಶಿಷ್ಟ ಕಣ್ಣು ಇರುವುದರಿಂದಲೆ ಶರಣ ಸಾಹಿತ್ಯ ಇಂದಿಗೂ ನಮ್ಮ ವಿವೇಕ ತಿದ್ದುವ ಆಯುಧವಾಗಿದೆ.

ಶರಣರಿಗೆ ಬಾಹ್ಯ ಆಡಂಬರ ಆಚರಣೆಗಳಿಗಿಂತ ಅಂತರಂಗದ ಶುಚಿತ್ವ ಮುಖ್ಯ. 'ಮಂಡೆ ಮಾಸಿದಡೆ ಮಹಾಮಜ್ಜನವ ಮಾಡುವುದು; ವಸ್ತ್ರ ಮಾಸಿದೊಡೆ ಮಡಿವಾಳಗಿಕ್ಕುವುದು; ಮನದ ಮೈಲಿಗೆ ತೊಳೆಯಬೇಕಾದರೆ ಕೂಡಲ ಚೆನ್ನಸಂಗಯ್ಯನ ಶರಣರ ಅನುಭಾವ ಮಾಡುವುದು' ಮೊದಲಿನ ಎರಡೂ ಕ್ರಿಯೆಗಳು ಸುಲಭವಾಗಿವೆ. ದೇಹದ ಕೊಳೆಯನ್ನು ಸ್ನಾನದ ಮೂಲಕ ತೊಳೆಯಬಹುದು, ಬಟ್ಟೆ ಹೊಲಸಾದರೆ ಮಡಿವಾಳನಿಗೆ ಕೊಟ್ಟು ಶುಚಿಯಾಗಿಸಬಹುದು. ಮೂರನೆಯದು ಕಷ್ಟ. ಮನಸ್ಸು ಮಲಿನವಾದರೆ ತೊಳೆಯುವುದು ಹೇಗೆ? ಇದಕ್ಕೆ ಆಧ್ಯಾತ್ಮದ ಅನುಭೂತಿ, ಧರ್ಮ-ಕರ್ಮಗಳ ಸೂಕ್ಷ್ಮತೆ ಬೇಕು. ಅಂತರಂಗದಲ್ಲಿ ಸತ್ಯ ಶುದ್ಧನಾಗದೆ ಹೊರಗಿನ ಆಚರಣೆಗಳಿಂದ ಏನು ಸುಖ? ಎಳ್ಳು ಬೆಲ್ಲ ಹಂಚಿ ಪರಸ್ಪರ ಗೌರವದಿಂದ ಒಬ್ಬರಿಗೊಬ್ಬರು ಬಾಂಧವ್ಯ ಬೆಸೆದು ಮನಸ್ಸು ಹಗುರವಾಗಿಸುವ ಕ್ರಿಯೆಯಾದ್ದರಿಂದ ಅಣ್ಣ ತಮ್ಮಂದಿರು, ಬಂಧು ಬಾಂಧವರು, ಸ್ನೇಹಿತರು ನೆರೆಕೆರೆಯವರು ಹೀಗೆ ಎಲ್ಲರೂ ಕೆಟ್ಟ ಮಾತು, ವಿರಸ ಮರೆತು ಒಂದಾಗಿ ಬೆರೆಯುವ ಸಂಭ್ರಮ ಈ ಸಂಕ್ರಾಂತಿಯಲ್ಲಿದೆ. ಆದರೆ ನಮ್ಮೊಳಗೊಂದು 'ಅಂತರ್ ಸಂಕ್ರಾಂತಿ'ಯಾಗದೆ ಇದ್ದರೆ ಎಷ್ಟು ಎಳ್ಳು ಬೆಲ್ಲ ಕೊಟ್ಟು ಏನು ಪ್ರಯೋಜನ? ಒಳಗಿನ ಅಜ್ಞಾನ ತೊಳೆದುಕೊಳ್ಳದೆ ಹೊರಗಿನ ಪುಣ್ಯ ಸ್ನಾನದಿಂದೇನು ಫಲ? ಎಂಬ ಒಳತಿಳಿವು ವಚನಕಾರರದ್ದು. ನಡೆ ನುಡಿ ಶುಚಿಯಾಗದ ಹೊರತು ಹೊರಗಿನ ವಸ್ತ್ರ-ಆಭರಣಗಳು ಕೇವಲ ತೋರಿಕೆಯಾಗುತ್ತವೆಯೆ ವಿನಃ ಅದು ವ್ಯಕ್ತಿತ್ವದ ಗಟ್ಟಿತನ ತೋರಿಸುವುದಿಲ್ಲ. ಕರ್ಮಗೇಡಿಗಳ ಭ್ರಾಂತಿಯ ಬಗ್ಗೆ ದೇಶಿಕೇಂದ್ರ ಚೆನ್ನಬಸವಯ್ಯನವರ ಒಂದು ವಚನ ಗಮನಿಸಬೇಕು.

ಹರಗುರುವಾಕ್ಯ ಪ್ರಮಾಣವರಿಯದೆ ಅಜ್ಞಾನವಾವರಿಸಿ
ವಾರ ತಿಥಿಯೆಂದು,
**ಸಂಕ್ರಾಂತಿ** ಅಮವಾಸ್ಯೆಯೆಂದು ನೇಮಿಸಿ
ಮಾಡಿ ನೀಡಿ ಕರ್ಮ ಕಳೆದೆನೆಂಬ ವ(ಕ)ರ್ಮಗೇಡಿಗಳ ನೋಡಾ
ಮತ್ತೊಂದು ವೇಳೆ ಜಂಗಮ ಮನೆಗೆ ಬಂದರೆ ಅಡ್ಡಮೋರೆಯಿಕ್ಕುವ
ಗೊಡ್ಡು ಮಾದಿಗರ ಶಿವಭಕ್ತರೆಂದರೆ ಅಘೋರ ನರಕವೈ
ಗುರು ನಿರಂಜನ ಚೆನ್ನಬಸವಲಿಂಗ

ಮನುಷ್ಯನ ಬದುಕು ಪಂಚಾಂಗದ ಮೇಲೆ ನಿಂತಿಲ್ಲ. ವಾರ ತಿಥಿ ನಕ್ಷತ್ರ, ಅಮವಾಸ್ಯೆ, ಹುಣ್ಣಿಮೆ, ಸಂಕ್ರಾಂತಿಯೆಂದು ವಿಧಿ ನಿಷೇಧಗಳನ್ನು ಆಚರಿಸಿದ ಮಾತ್ರಕ್ಕೆ ನಮಗೆ ಅಂಟಿಕೊಂಡ ಕರ್ಮ ಬಿಟ್ಟು ಹೋಗುತ್ತದೆಯೇ? ನಾನಾ ವಿಧದ ಪಾಪ ಕರ್ಮಗಳನ್ನು ಮಾಡಿ ಬಾಯಿಯಲ್ಲಿ ದೇವರ ನಾಮಸ್ಮರಣೆ ಮಾಡಿದ ತಕ್ಷಣ ಪಾಪಗಳು ನಾಶವಾಗಿ ಹೋಗುತ್ತದೆಯೆ? ಎಂದಿಗೂ ಸಾಧ್ಯವಾಗುವುದಿಲ್ಲ. ಅಜ್ಞಾನವು ಆವರಿಸಿಕೊಂಡಿರುವವರೆಗೂ ಕರ್ಮ ಕ್ಷಯವು ಸಾಧ್ಯವಿಲ್ಲ. ಅರಿವಿನ ಬೆಳಕು ತೋರುವ ಗುರುವಿನ ಕೃಪೆಯಾಗದ ಹೊರತು ವ್ಯಕ್ತಿತ್ವದಲ್ಲಿ ಬದಲಾವಣೆ

ಸಾಧ್ಯವಾಗುವುದಿಲ್ಲ. ಲಿಂಗದಲ್ಲಿ ಮನವಿರಿಸಿದ ಶರಣನಿಗೆ ದಿನ ಶ್ರೇಷ್ಠವಲ್ಲ. ಲಿಂಗವೇ ಶ್ರೇಷ್ಠ. ಹುಣ್ಣಿಮೆ, ಸಂಕ್ರಾಂತಿ, ಶಿವರಾತ್ರಿಗಳಲ್ಲಿ ಸೋಮವಾರ ಮಂಗಳವಾರ ಉಪವಾಸ, ವ್ರತ ಮಾಡಿ ಆಮೇಲೆ ಲಿಂಗಕ್ಕೆ ನೈವೇದ್ಯ ಮಾಡಿ ಊಟ ಮಾಡುವ ಅನಾಚಾರಿ ಭಕ್ತನ ಮುಖ ನೋಡಲಾಗದು. ದಿನವೇ ಶ್ರೇಷ್ಠವೆಂದು ಭಾವಿಸಿ ದಿನವನ್ನೇ ದೈವವೆಂದು ಪೂಜೆ ಮಾಡುವವನು 'ದಿನ ಭಕ್ತ'; ಲಿಂಗ ಜಂಗಮವೇ ಘನವೆಂದು ಅರಿತು ಪೂಜಿಸುವವನು 'ಲಿಂಗಭಕ್ತ'. ತಿಥಿ ವಾರಗಳನ್ನು ಅನುಸರಿಸಿ ಭಕ್ತಿ ಮಾಡುವವನು ಭಕ್ತನಲ್ಲ; ಭವಿ ಎನ್ನುತ್ತಾನೆ ಚೆನ್ನಬಸವಣ್ಣ.

ಸೋಮವಾರ ಮಂಗಳವಾರ ಹುಣ್ಣಿಮೆ ಸಂಕ್ರಾಂತಿ ಶಿವರಾತ್ರಿ
ಮೊದಲಾದ ತಿಥಿವಾರಂಗಳಲ್ಲಿ ಏಕಭುಕ್ತೋಪವಾಸಿಯಾಗಿ
ಆ ಕ್ಷುದ್ರ ತಿಥಿಗಳಲ್ಲಿ, ಮಾಡಿದ ನೀಚೋಚ್ಛಿಷ್ಟವಂ ತಂದು
ತನ್ನ ಕರಸ್ಥಲದ ಇಷ್ಟಲಿಂಗಕ್ಕೆ ಕೊಟ್ಟು ಕೊಂಡು ಭಕ್ತನೆನಿಸಿಕೊಂಡೆನೆಂಬ
ಅನಾಚಾರಿಯ ಮುಖವ ನೋಡಲಾಗದು ನೋಡಲಾಗದು.
ಅದೇನು ಕಾರಣವೆಂದಡೆ:
ದಿನ ಶ್ರೇಷ್ಠವೊ ? ಲಿಂಗ ಶ್ರೇಷ್ಠವೊ ? ದಿನ ಶ್ರೇಷ್ಠವೆಂದು ಮಾಡುವ
ದುರಾಚಾರಿಯ ಮುಖವ ನೋಡಲಾಗದು, ನೋಡಲಾಗದು, ಅದೆಂತೆಂದಡೆ:
ಆವ ದಿನ ಶ್ರೇಷ್ಠವೆಂದು ದಿನವೆ ದೈವವೆಂದು ಮಾಡುವನಾಗಿ,
ಅವನು ದಿನದ ಭಕ್ತನು. ಅವನಂತಲ್ಲ ಕೇಳಿರಣ್ಣ ಸದ್ಭಕ್ತನು_
ಲಿಂಗವೆ ಘನವೆಂದು ಜಂಗಮವೆ ಶ್ರೇಷ್ಠವೆಂದು
ಆ ಲಿಂಗಜಂಗಮವೆ ಶ್ರೇಷ್ಠವೆಂದು ಆ ಲಿಂಗಜಂಗಮವೆ ದೈವವೆಂದು
ಮಾಡುವನಾಗಿ ಆತ ಲಿಂಗಭಕ್ತನು. ಈ ಲಿಂಗಭಕ್ತಂಗೆ ದಿನದ ಭಕ್ತನ ತಂದು
ಸರಿಯೆಂದು ಹೋಲಿಸಿ ನುಡಿವಂಗೆ, ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ
ಪಾದೋದಕವಿಲ್ಲ ಪ್ರಸಾದವಿಲ್ಲ,
ಅವ ಭಕ್ತನಲ್ಲ, ಅವಂಗೆ ಅಘೋರನರಕ.
ಭವಿದಿನ_ತಿಥಿ_ವಾರಂಗಳಲ್ಲಿ ಕೂತು ಮಾಡುವಾತ
ಭಕ್ತನಲ್ಲ. ಅಲ್ಲಿ ಹೊಕ್ಕು ಲಿಂಗಾರ್ಚನೆಯ ಮಾಡುವಾತ ಜಂಗಮವಲ್ಲ.
ಈ ಉಭಯರನು ಕೂಡಲಚೆನ್ನಸಂಗಯ್ಯ ಕುಂಭೀಪಾತಕ ನಾಯಕನರಕದಲ್ಲಿಕ್ಕುವನು

ಶರಣ ತತ್ವವು ವೈಚಾರಿಕತೆಯನ್ನು ಬೆಂಬಲಿಸುವುದರಿಂದ ನಮ್ಮ ಶಾಸ್ತ್ರ ಸಂಪ್ರದಾಯಗಳನ್ನು ಪರಾಮರ್ಶಿಸುತ್ತದೆ. ವೈದಿಕ ಪರಂಪರೆಯ ಆಚರಣೆಗಳು ಅವರಿಗೆ ಅರ್ಥಹೀನವೆಂಬಂತೆ ಕಾಣುತ್ತದೆ. ಪರಂಪರೆಯ ಕೊರಳಿಗೆ ನೇಣು ಬಿಗಿದುಕೊಂಡು ಡಾಂಭಿಕತೆಯಲ್ಲಿ ತೊಡಗುವವರ ವಿರುದ್ಧ ವಚನಕಾರರು ಕಿಡಿಕಾರುತ್ತಾರೆ. ಶಾಸ್ತ್ರ, ಜೋತಿಷ್ಯ, ತಿಥಿ, ವಾರ,ನಕ್ಷತ್ರ, ಅಮವಾಸ್ಯೆ, ಹುಣ್ಣಿಮೆ ದಿನಗಳು ಸಾಮಾನ್ಯ ಭಕ್ತರ ಶೋಷಣೆಗಾಗಿ ಸೃಷ್ಟಿಯಾಗಿವೆ. ಅದನ್ನು ಮೀರದ ಹೊರತು ಜನಸಾಮಾನ್ಯರಿಗೆ ಉಳಿಗಾಲವಿಲ್ಲವೆಂದು ನಂಬುತ್ತಾರೆ. ಶಿವ ಶರಣರಿಗೆ ಪೂಜೆ, ವ್ರತಾಚರಣೆಗಳಿಗಿಂತ ಸತ್ಯ ಶುದ್ಧ ನಡೆ ನುಡಿಯೇ ಶ್ರೇಷ್ಠ.

ಪರಮ ಬೆಳಗಿನಿಂದೆಸೆವ
ನಿಜವೀರಶೈವ ಭಕ್ತಜಂಗಮಲಿಂಗ ಘನಗಂಭೀರರು
ಪಂಚಾಭಿಷೇಕ ಮೊದಲಾದ ಅನಂತ ಅಭಿಷೇಕ
ಪತ್ರಿ ಪುಷ್ಪ ಫಲಹಾರ ಪಂಚಕಜ್ಜಾಯ ಪರಮಾನ್ನ ಪಾಯಸ
ಮೊದಲಾದ ಕಟ್ಟಳೆಗಳ ಮಾಡದೆ,
ವಾರ ತಿಥಿ ನಕ್ಷತ್ರ ವ್ಯತಿಪಾತ ವೈಧೃತಿ,
ಚಂದ್ರಸೂರ್ಯಗ್ರಹಣ ಹುಣ್ಣಿಮೆ ಅಮವಾಸ್ಯೆ
ಸತ್ತ ಹೆತ್ತ ಕರ್ಮದ ತಿಥಿಗಳು,
ಕಾರ್ತೀಕ ಮಾಘ ಶ್ರಾವಣ ಶಿವರಾತ್ರಿ ನವರಾತ್ರಿ
ಸಂಕ್ರಾಂತಿ ಕತ್ತಲರಾತ್ರಿ ದಿನರಾತ್ರಿಗಳೆಂಬ
ದಿವಾರ್ಚನೆ ಸಾಮಾನ್ಯದಾರ್ಚನೆ ಮೊದಲಾದ
ಶೈವಜಡಕರ್ಮಗಳ ಹೊದ್ದಲೀಯದೆ,
ಸತ್ಯಶುದ್ಧ ನಡೆನುಡಿಯಿಂದ
ಕೇವಲ ನಿಜಗುರುಲಿಂಗಜಂಗಮಮೂರ್ತಿಗಳ
ಬಂದ ಬರವ ನಿಂದ ನಿಲುಗಡೆಯನರಿದು,
ಅಷ್ಟವಿಧಾರ್ಚನೆ ಷೋಡಶೋಪಚಾರಗಳೊದಗಿದಂತೆ
ನಿಜಾನಂದಭರಿತದಿಂದರ್ಚನಂಗ್ಯದು,
ಪರಶಿವಯೋಗಾನುಸಂಧಾನದಿಂದಾಚರಿಸುವುದೇ
ನಿರವಯಪ್ರಭು ಮಹಾಂತನ ಪ್ರತಿಬಿಂಬರೆಂಬೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ.

ವಚನಕಾರರ ನಿಲುವುಗಳು ಕ್ರಾಂತಿಕಾರಕವಾಗಿರುವುದರಿಂದಲೇ ಹನ್ನೆರಡನೇ ಶತಮಾನ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ನಮ್ಮ ಪರಂಪರೆಯ ಶ್ರದ್ಧೆಯನ್ನು ತಿದ್ದುವ, ಅದರ ವೈಚಾರಿಕ ಅಭಿವ್ಯಕ್ತಿಗೆ ತೆರೆದುಕೊಳ್ಳುವ ಹೊಸ ನೋಟಗಳು ವಚನ ಸಾಹಿತ್ಯದಲ್ಲಿವೆ. ಜನಸಾಮಾನ್ಯರಿಗೆ ದೇವರನ್ನು ತಲುಪುವ ಸರಳ ಮಾರ್ಗದ ಹುಡುಕಾಟದಲ್ಲಿದ್ದ ಶರಣರಿಗೆ ದೇವರು ಧರ್ಮದ ಹೆಸರಿನಲ್ಲಿರುವ ಎಷ್ಟೋ ಆಚರಣೆಗಳು ಅರ್ಥಹೀನವೆನಿಸಿದೆ. ಭಕ್ತಿಯ ಹೆಸರಿನಲ್ಲಿ ಭಯ ಹುಟ್ಟಿಸುವ ಶಾಸ್ತ್ರ ಸಾಧನಗಳು ಶೋಷಣೆಯ ಭಾಗವೆನಿಸಿದೆ. ದೇವರನ್ನು ಕಂಡು ಕೊಳ್ಳುವ ದಾರಿ ಸರಳವಾಗಿರಬೇಕು. ಅದು ಅರಿವಿನ ದಾರಿಯಾಗಬೇಕೆನ್ನುವ ಉದಾತ್ತ ಉದ್ದೇಶ ಶರಣರಿಗಿದೆ. ಹಾಗಾಗಿ ಶರಣರದ್ದು ಅರಿವಿನ ಸಂಕ್ರಾಂತಿ; ಸಂಸ್ಕೃತಿ ಕ್ರಾಂತಿ. ಬದಲಾವಣೆಗೆ ಒಪ್ಪಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲ. ಅದಕ್ಕೆ ಸಾಂಘಿಕ ಪ್ರಯತ್ನಬೇಕು. ಒಳಿತು ಕೆಡುಕುಗಳ ನಡುವಿನ ಘರ್ಷಣೆಯಿಂದಲೇ ಹೊಸ ಕ್ರಾಂತಿಯ ಕಿಡಿ ಹುಟ್ಟಲು ಸಾಧ್ಯ. ಅಂತರಂಗದಲ್ಲಿ ಬೆಳಕು ಮೂಡಬೇಕಾದರೆ ಅರಿವಿನ ಕಡೆಗಿನ ನಮ್ಮ ಪಯಣ ಪ್ರಾರಂಭವಾಗಬೇಕು. ನುಡಿಯ ಶುಚಿತ್ವ ಕಾಪಾಡಿಕೊಳ್ಳಬೇಕೆನ್ನುವುದಕ್ಕಾಗಿಯೇ 'ಎಳ್ಳು ಬೆಲ್ಲ ತಿಂದು ಒಳ್ಳೊಳ್ಳೆಯ ಮಾತಾಡಿ' ಎಂಬ ನಾಣ್ನುಡಿ ಹುಟ್ಟಿತು. ಅದನ್ನೆ ಬಸವಣ್ಣನವರು 'ನುಡಿದರೆ ಮುತ್ತಿನ ಹಾರದಂತಿರಬೇಕು' ಎನ್ನುವ ವಚನದಲ್ಲಿ ನುಡಿಯನ್ನು ವಿಶ್ಲೇಷಿಸಿರುವುದು. ಸಂಕ್ರಾಂತಿಯಂದು ಬಸವಾದಿ ಶರಣರು ಹುಟ್ಟಿಸಿದ ಕ್ರಾಂತ್ರಿಯ ಕಿಡಿಯನ್ನು ಮತ್ತೆ ಮತ್ತೆ ನೆನಪಿಸುವುದಕ್ಕಾಗಿ ಎತ್ತ(ಬಸವ)ನ್ನು ಬೆಂಕಿಗೆ ಹಾಯಿಸುವ ಆಚರಣೆಯು ಹುಟ್ಟಿರಬೇಕು. ಭಕ್ತನ ಮನೆಯನ್ನೆ ವರಣಾಸಿ ಮಾಡುವ

ಮನೋ ಹಂಬಲವಿರುವ ಶರಣರಿಗೆ ಪ್ರತಿ ದಿನವೂ ಸಂಕ್ರಾಂತಿ, ಅಮವಾಸ್ಯೆ, ಹುಣ್ಣಿಮೆ. ಬೆಳಿಗ್ಗೆ ಅಮವಾಸ್ಯೆ, ಮಧ್ಯಾಹ್ನ ಸಂಕ್ರಾಂತಿ, ಸಂಜೆ ಹುಣ್ಣಿಮೆ.

ಅಚ್ಚ ಶಿವೈಕ್ಯಂಗೆ ಹೊತ್ತಾರೆ ಅಮವಾಸ್ಯೆ;
ಮಟ್ಟ ಮಧ್ಯಾಹ್ನ ಸಂಕ್ರಾಂತಿ;
ಮತ್ತೆ ಅಸ್ತಮಾನ ಪೌರ್ಣಮಿ ಹುಣ್ಣಿಮೆ;
ಭಕ್ತನ ಮನೆಯ ಅಂಗಳವೆ ವಾರಣಾಸಿ ಕಾಣಾ! ರಾಮನಾಥ.

ಹಬ್ಬ ಹರಿದಿನಗಳು ಗೊಡ್ಡು ಆಚರಣೆಗಳಾಗದೆ ಅರಿವಿನ ಸಂಸ್ಕೃತಿ ಹರಡುವ ಸಂಕ್ರಾಂತಿಯಾಗಬೇಕೆನ್ನುವ ಆಶಯಗಳನ್ನು ನೆನಪಿಸುತ್ತಾ ನಿಜವಾದ ಸಂಕ್ರಾಂತಿಯ ಅರ್ಥ ತಿಳಿಯಬೇಕಿದೆ.

**ಆಧಾರ ಗ್ರಂಥಗಳು:**

೧. ವಚನ ಸಾಹಿತ್ಯ ಮತ್ತು ಮಹಿಳೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ನಗರ ಘಟಕ, ಮೈಸೂರು(೧೯೯೭)
೨. ವಚನ ಸಾಹಿತ್ಯದಲ್ಲಿ ಕೆಳವರ್ಗದ ಆಶಯ ಮತ್ತು ಅಭಿವ್ಯಕ್ತಿ: (ಸಂ) ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು (೧೯೯೩)
೩. ವಚನ ಸಾಹಿತ್ಯ ಸಂಗ್ರಹ: (ಸಂ.) ಸಂ.ಶಿ.ಭೂಸನೂರಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು (೨೦೦೬)
೪. ಲಿಂಗಾಯತ ಕನ್ನಡದ ವಚನಧರ್ಮ: ಎಸ್.ಜಿ.ಸಿದ್ಧರಾಮಯ್ಯ, ಸ್ವಪ್ನ ಬುಕ್ ಹೌಸ್ ಬೆಂಗಳೂರು(೨೦೧೯)